# ರಸಪ್ರಸಂಗಗಳ ಕಾಮನಬಿಲ್ಲು

## ರಾಧಾಕೃಷ್ಣನ್‌ರ ವ್ಯಕ್ತಿತ್ವದ ಔನ್ನತ್ಯ ಮತ್ತು ವಿನೋದಪ್ರಿಯತೆಯ ಪ್ರಸಂಗಗಳು

■ ಗುರುರಾಜ್ ಎಸ್. ದಾವಣಗೆರೆ
ರೇಖಾಚಿತ್ರಗಳು: ಸಂತೋಷ್ ಸಸಿಹಿತ್ಲು



ರಾಧಾಕೃಷ್ಣನ್ ಅವರು 1965ರಲ್ಲಿ ಬೆಂಗಳೂರಿಗೆ ಭೇಟಿ ಕೊಟ್ಟಾಗಿನ ಚಿತ್ರ ಪ್ರಜಾವಾಣಿ ಆರ್ಕೈವ್

**ಸೆಪ್ಟೆಂಬರ್ 5**
**ಪ್ರೊ. ಎಸ್. ರಾಧಾಕೃಷ್ಣನ್ ಅವರ ಜನ್ಮದಿನ**
**ಶಿಕ್ಷಕರ ದಿನ**

ದೇಶದ ಎರಡನೇ ರಾಷ್ಟ್ರಾಧ್ಯಕ್ಷರು, ಶ್ರೇಷ್ಠ ತತ್ವಜ್ಞಾನಿ, ಮಹಾನ್ ಶಿಕ್ಷಕ ಎಂಬ ಖ್ಯಾತಿಯ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಹುಟ್ಟುಹಬ್ಬವನ್ನು'ಶಿಕ್ಷಕರ ದಿನ' ಎಂದು ಆಚರಿಸಿ, ಇಡೀ ಶಿಕ್ಷಕ ಸಮುದಾಯವನ್ನು ಗೌರವಿಸುತ್ತೇವೆ. ಐದು ವರ್ಷಗಳ ಕಾಲ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿ, ರಾಯಭಾರಿಯಾಗಿ ಹಲವು ದೇಶಗಳನ್ನು ಸಂದರ್ಶಿಸಿ, ಅಲ್ಲೆಲ್ಲ ಭಾರತದ ತತ್ವಜ್ಞಾನವನ್ನು ಪ್ರಚುರ ಪಡಿಸಿದ ಹೆಗ್ಗಳಿಕೆ ರಾಧಾಕೃಷ್ಣನ್ ಅವರದು. ಜೀವನದ ಪರಮತತ್ವ ಸಾರುವ ತತ್ವಜ್ಞಾನದಲ್ಲಿ ಪರಿಣತಿ ಹೊಂದಿದ್ದ ರಾಧಾಕೃಷ್ಣನ್ ಸ್ವಭಾವತಃ ವಿನೋದ ಪ್ರಿಯರಾಗಿದ್ದರು ಎಂಬುದು ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಅವರ ವಿನೋದಪ್ರಜ್ಞೆ ಹಾಗೂ ವ್ಯಕ್ತಿತ್ವದ ಔನ್ನತ್ಯವನ್ನು ಸೂಚಿಸುವ ಏಳು ರಸಪ್ರಸಂಗಗಳು ಇಲ್ಲಿವೆ.